# ಮುಗಿದ ರಮ್ಯ ಚೈತ್ರ ಕಾಲ!



◆ 'ನೀವು ಮತ್ತೆ ಸಿನಿಮಾ ಮಾಡುವುದು ಯಾವಾಗ?'
'ಹಡಗು ತುಂಬ ಹಿಂದೆಯೇ ಅಲ್ಲಿಂದ ಸಾಗಿ ಮುಂದೆ ಹೋಗಿಯಾಗಿದೆ'
◆ 'ಆ ಹಡಗನ್ನು ಯಾಕೆ ಹಿಂದಕ್ಕೆ ಕರೆದುಕೊಂಡು ಬರಬಾರದು?'
'ಅದು ಮುಳುಗಿಹೋಗಿದೆ!'

—ಈ ಪ್ರಶ್ನೋತ್ತರ ಕಂಡಿದ್ದು ನಟಿ ರಮ್ಯಾ ಅವರ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ. ರಮ್ಯಾ ರಾಜಕೀಯ ಪ್ರವೇಶ ಮಾಡಿ, ಕಾಂಗ್ರೆಸ್‌ನ ಐಟಿ ಟೀಂ ಚುಕ್ಕಾಣಿ ಹಿಡಿದಾಗಲೇ ಅವರ ನಟನಾಪಯಣ ಬಹುತೇಕ ಮುಗಿದಂತೆ ಆಯಿತು. ಮುಕ್ತಾಯದ ನಿಲ್ದಾಣ ಬಂದಿದೆ ಎಂಬುದನ್ನು ಅರಿತೇ ಅವರು ರಾಜಕೀಯದ ಬಸ್ಸು ಏರಿದರೋ ಏನೋ. ಒಟ್ಟಾರೆ ಸ್ಯಾಂಡಲ್‌ವುಡ್‌ನ ಮಹಾಮನೆಯಿಂದ ಅವರು ಹೊರಬಿದ್ದು ಹೋಗಿ ಐದು ವರ್ಷಗಳು ಕಳೆದಿವೆ. ಆದರೆ ಅವರ ಅನುಪಸ್ಥಿತಿಯನ್ನು ತುಂಬಲು ಯಾರಿಂದಲೂ ಸಾಧ್ಯವಾಗಿಲ್ಲ ಎಂಬುದಂತೂ ನಿಜ.

ಈಗಲೂ ರಮ್ಯಾ ಎಂಬ ಹೆಸರು ಕೇಳಿದಾಕ್ಷಣ ರೋಮಾಂಚನದಲ್ಲಿ ಕಣ್ಣರಳಿಸುವ ಹುಡುಗರ ದೊಡ್ಡ ದಂಡೇ ಇದೆ. ಅವರ ಕಣ್ಣ ಹೊಳಪು, ಕೂದಲ ನಯ, ಮುಖದ ಕಾಂತಿಯನ್ನೆಲ್ಲ ತುಸು ಅಸೂಯೆಯಲ್ಲಿಯೂ, ಅಷ್ಟೇ ಅಭಿಮಾನದಲ್ಲಿಯೂ ನೋಡಿಕೊಳ್ಳುವ ಹೆಣ್ಣುಮಕ್ಕಳ ದಂಡೂ ಅಷ್ಟೇ ದೊಡ್ಡದಿದೆ. 'ಅವರು ಪ್ರತಿದಿನ ಹಾಲಿನಲ್ಲಿಯೇ ಸ್ನಾನ ಮಾಡ್ತಾರಂತೆ. ಅವರ ಬಾತ್‌ರೂಮಿನಲ್ಲಿ ಮಿನರಲ್ ವಾಟರ್ ಮಾತ್ರವೇ ಇರುವುದಂತೆ' ಎಂಬಿತ್ಯಾದಿ ಕಥೆಗಳು ಈಗಲೂ ಯಾವುದಾದರೂ ನಟಿಯ ಬಗ್ಗೆ ಹರಿದಾಡುತ್ತಿದ್ದರೆ ಅದು ರಮ್ಯಾ ಬಗ್ಗೆ ಮಾತ್ರ ಎಂದರೆ ಅವರ ಪ್ರಭಾವ ಎಷ್ಟಿರಬಹುದು ಊಹಿಸಿ.

ಈಗ ರಮ್ಯಾ ಚಿತ್ರರಂಗಕ್ಕೆ ಅಧಿಕೃತ ವಿದಾಯ ಹೇಳಿದ್ದಾರೆ; ರಾಜಕೀಯಕ್ಕೂ! 'ನನ್ನ ಕಾಲ ಮುಗಿಯಿತು' ಎಂಬುದು ಅವರಿಗೆ ಗೊತ್ತಾಗಿದೆ. ಅದು ಗೊತ್ತಾದಮೇಲೂ ಅಲ್ಲಿಯೇ ಹಪಹಪಿಸುತ್ತ ನಿಂತಿರದೆ ಮುಂದಕ್ಕೆ ನಡೆದುಹೋಗಿದ್ದಾರೆ ಎಂಬುದೂ ಅವರ ಗಟ್ಟಿ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಹಾ, ಸೌಂದರ್ಯದ ದೃಷ್ಟಿಯಿಂದ ರಮ್ಯಾ ಕುಸುಮಕೋಮಲೆಯೇ ಹೌದಾದರೂ ವ್ಯಕ್ತಿತ್ವದಲ್ಲಿ ಅವರೆಂಥ ಗಟ್ಟಿಗಿತ್ತಿ ಎಂಬುದಕ್ಕೆ ಚಿತ್ರರಂಗದಲ್ಲಿಯೂ, ರಾಜಕೀಯದ ಪಡಸಾಲೆಯಲ್ಲಿಯೂ ಸಾಕಷ್ಟು ಉದಾಹರಣೆಗಳು ಸಿಗುತ್ತವೆ.

ಪಾರ್ವತಮ್ಮ ರಾಜ್‌ಕುಮಾರ್ ಅವರಿಂದ 'ರಮ್ಯಾ' ಆಗಿ ಮರುನಾಮಕರಣಗೊಂಡ ದಿವ್ಯಸ್ಪಂದನರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದು ದೊಡ್ಮನೆಯೇ. 'ಅಭಿ' ಸಿನಿಮಾದಲ್ಲಿ ಪುನೀತ್ ಅವರ ಜೊತೆಗೆ ತೆರೆಯ ಮೇಲೆ ಕಾಣಿಸಿಕೊಂಡಾಗ ಈ ಗಿಳಿಮೂಗಿನ ಎಳೆಯ ಹುಡುಗಿ ಮುಂದೊಂದು ದಿನ ಚಿತ್ರರಂಗದ ಬಹುಬೇಡಿಕೆಯ ನಟಿಯಾಗುತ್ತಾಳೆ ಎಂದು ಯಾರೂ ಊಹಿಸಿರಲಿಕ್ಕಿಲ್ಲ. 2003ರಲ್ಲಿಯೇ ತೆರೆಕಂಡ 'ಎಕ್ಸ್ ಕ್ಯೂಸ್ ಮೀ' ಕೂಡ ಅವರ ಹೆಸರಿನಲ್ಲಿರುವ ಸೂಪರ್‌ಹಿಟ್ ಸಿನಿಮಾ. ಅದೇ ವರ್ಷ ಅವರೊಂದು ತೆಲುಗು ಸಿನಿಮಾದಲ್ಲಿಯೂ ನಟಿಸಿದರು. ಕನ್ನಡದ ಜೊತೆಗೆ ತೆಲುಗು, ತಮಿಳುಗಳಲ್ಲಿಯೂ ರಮ್ಯಾ ಬೇಡಿಕೆಯನ್ನು ಗಿಟ್ಟಿಸಿಕೊಳ್ಳುತ್ತಲೇ ಬೆಳೆದರು.

'ಆಕಾಶ್', 'ಅರಸು', 'ಗೌರಮ್ಮ', 'ಅಮೃತಧಾರೆ', 'ಜೂಲಿ', 'ತನನಂ ತನನಂ', 'ಮುಸ್ಸಂಜೆ ಮಾತು', 'ಜಸ್ಟ್ ಮಾತ್ ಮಾತಲ್ಲಿ', 'ಸಿದ್ಲಿಂಗು', 'ಕಠಾರಿವೀರ ಸುರಸುಂದರಾಂಗಿ' – ಹೀಗೆ ಅವರ ಸಿನಿಮಾಪಟ್ಟಿಯಲ್ಲಿ ಸೂಪರ್‌ಹಿಟ್‌ಗಳ ದೊಡ್ಡ ಸಾಲೇ ಇದೆ. 'ನಾಗರಹಾವು' ಅವರು ಬೆಳ್ಳಿತೆರೆಯ ಮೇಲೆ ಕಾಣಿಸಿಕೊಂಡ ಕೊನೆಯ ಸಿನಿಮಾ.

ಬರೀ ನಟನೆಯಿಂದಷ್ಟೇ ಅಲ್ಲ, ನೇರ ನುಡಿಯಿಂದಲೂ ರಮ್ಯಾ ಆಗಾಗ ಸುದ್ದಿಯಾಗುತ್ತಿದ್ದರು. 2006ರಲ್ಲಿ 'ಜೂಲಿ' ಸಿನಿಮಾದಲ್ಲಿ ಅವರು ಕಾಣಿಸಿಕೊಂಡ ಮಾದಕ ಲುಕ್ ಪಡ್ಡೆಗಳ ಎದೆಯಲ್ಲಿನ್ನೂ ನಿಗಿನಿಗಿ ಉರಿಯುತ್ತಲೇ ಇದೆ. 'ಮುಸ್ಸಂಜೆ ಮಾತು' ಸಿನಿಮಾ ಸೂಪರ್ ಹಿಟ್ ಆದ ನಂತರ ಸುದೀಪ್ ಜೊತೆಗೆ ಸೇರಿಕೊಂಡು ಮಾಡಿದ ಇನ್ನೊಂದು ಸಿನಿಮಾ 'ಜಸ್ಟ್ ಮಾತ್ ಮಾತಲ್ಲಿ' ಸಮಯದಲ್ಲಿ ಸುದೀಪ್ ಜೊತೆ ಜಗಳಮಾಡಿಕೊಂಡು ಹೊರಬಂದರು. ಇದರಿಂದ ಚಿತ್ರದ ಕ್ಲೈಮ್ಯಾಕ್ಸ್ ಅನ್ನೇ ಬದಲಿಸಬೇಕಾಯ್ತು. 'ಸಿದ್ಲಿಂಗು' ಚಿತ್ರದ ನಿರ್ದೇಶಕರೇ ನಿರ್ದೇಶಿಸಿದ 'ನೀರ್ ದೋಸೆ'ಯಲ್ಲಿಯೂ ರಮ್ಯಾ ನಟಿಸುತ್ತಿದ್ದರು. ಆ ಚಿತ್ರತಂಡದೊಂದಿಗೂ ಕಿರಿಕ್ ಮಾಡಿಕೊಂಡು ಹೊರಬಂದರು. ಅಭಿಮಾನಿಗಳು ಅವರ ನಟನೆಯ ಸೊಗಸಿನ ಹಾಗೆ, ತಡವರಿಸುತ್ತ ಕನ್ನಡದಲ್ಲಿ ಅವರು ಕೋಪದಿಂದ ಮೂಗು ಕೆಂಪು ಮಾಡಿಕೊಂಡು ಜಗಳವಾಡುವುದನ್ನೂ ಆಸ್ವಾದಿಸುತ್ತಿದ್ದರು. ■